ಎಂಪ್ಲಾಯಿಸ್‌ಗೆ ೫೮ ವರ್ಷ ಸರ್ವಿಸ್ ಇರುತ್ತದೆ. ನಮ್ಮವರು ೩ ವರ್ಷ ಬೇಗನೆ ರಿಟೈರ್ ಆಗುವುದರಿಂದ ಅಷ್ಟು ಬೆನಿಫಿಟ್ಸ್ ಇರುವುದಿಲ್ಲ, ಅವರು ಇನ್ನು ೩ ವರ್ಷಗಳ ಕಾಲ ಹೆಚ್ಚಿಗೆ ಸರ್ವಿಸ್ ಮಾಡುವುದರಿಂದ ಅವರಿಗೆ ಅದರಿಂದ ಪೆನ್‌ಷನ್‌ಗೆ ಹೆಚ್ಚಿನ ಅನುಕೂಲವಿದೆ. ಆದುದರಿಂದ ಸೆಂಟ್ರಲ್ ಗೌವರ್ನ್‌ಮೆಂಟ್ ಸರ್ವೆಂಟ್ಸ್‌ಗೆ ಏನು ಡಿ.ಎ. ಕೊಡುತ್ತಿದ್ದಾರೋ ಅದೇ ರೇಟ್‌ನಲ್ಲಿ ಕೊಡತಕ್ಕ ರೀತಿಯಲ್ಲಿ ರೆಸ್ಪೋರ್ ಮಾಡತಕ್ಕದ್ದು ಒಳ್ಳೆಯದಲ್ಲವೇ?

ಶ್ರೀ ಎಂ. ವೀರಪ್ಪ ಮೊಯ್ಲಿ.—ರ್ಯಾಷನಲೈಜೇಷನ್ ಮಾಡುವಾಗ ಅವರಿಗೆ ಏನು ಕೊಡಬೇಕಾದ ಸವಲತ್ತುಗಳಿವೆಯೋ ಅವುಗಳನ್ನೆಲ್ಲಾ ಕೊಟ್ಟಿದ್ದೇವೆ. ಇದರಿಂದ ಇಂಡಿವಿಜ್ಯುಯಲ್‌ಗೂ ಬೆನಿಫಿಟ್ ಜಾಸ್ತಿಯಾಗಿದೆ! ರ್ಯಾಷನಲೈಜೇಷನ್ ಮಾಡುವಾಗ ಸ್ವಲ್ಪ ವ್ಯತ್ಯಾಸ ಕಾಣಬಹುದು. ಇದರಿಂದ ಹಳಬರಿಗೂ ಸ್ವಲ್ಪ ಜಾಸ್ತಿಯಾಗಿದೆ ಕಡಿಮೆ ಏನೂ ಆಗಿಲ್ಲ ನಾನು ಎಷ್ಟೋ ಸಾರಿ ಪೆನ್‌ಷನರ್ಸ್ ಅಸೋಶಿಯೇಷನ್‌ರವರೊಡನೆ ಮಾತಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಇದರಿಂದ ತೊಂದರೆಯಾಗಿದೆ ಎನ್ನತಕ್ಕದ್ದು ನನಗೆ ಮನವರಿಕೆಯಾಗಿಲ್ಲ, ಅದರೂ ಕೂಡ ಇದರಲ್ಲಿ ವೈಪರಿತ್ಯವಾದ ತೊಂದರೆಗಳು ಇವೆ ಎಂದು ಹೇಳುವುದಾದರೆ I am prepared to discuss with you and the Pensioner's Association.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಹರಿಯಾಣ ಸರ್ಕಾರದವರು ಕೂಡ ಸೆಂಟ್ರಲ್ ಗೌವರ್ನ್‌ಮೆಂಟ್ ಎಂಪ್ಲಾಯ್ಸ್‌ಗೆ ಏನು ಕೊಡುತ್ತಿದಾರೋ ಅದೇ ರೀತಿಯಲ್ಲಿ ಕೊಡುತ್ತಿದ್ದಾರೆ, ಮತ್ತೆ ಆಂಧ್ರ ಸರ್ಕಾರದವರು ಏನು ಮೆಡಿಕಲ್ ರಿ ಇಂಬರ್ಸ್‌ಮೆಂಟ್ ಕೊಡುತ್ತಿದ್ದಾರೋ ಅದನ್ನು ಸಹ ಕೊಡುವ ಬಗ್ಗೆ ಯೋಚನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನೊಂದು ಏನು ಮಾಡಿದ್ದೀರೆಂದರೆ ಪೆನ್‌ಷನ್‌ದಾರರಿಗೆ ೭೦ ವರ್ಷ ವಯಸ್ಸನ್ನು ಗೊತ್ತು ಮಾಡಿದ್ದೀರಿ. ೭೦ ವರ್ಷ ವಯಸ್ಸಿನವರೆಗೆ ಬದುಕಿರುವ ಪೆನ್‌ಷನ್‌ದಾರರು ಕಡಿಮೆ ಇರುವುದರಿಂದ ಆ ಒಂದು ವಯಸ್ಸಿನ ಮಿತಿಯನ್ನು ತೆಗೆಯುವೇಕೆಂದು ಹೇಳುತ್ತೇನೆ. ಅಲ್ಲದೆ, ಕೇಂದ್ರದವರಂತೆ ನಮ್ಮ ರಾಜ್ಯದ ನಿವೃತ್ತ ಸರ್ಕಾರೀ ನೌಕರರಿಗೂ ಮೆಡಿಕಲ್ ಬೆನಿಫಿಟ್ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಒಂದೊಂದು ರಾಜ್ಯದಲ್ಲಿ ಒಂದೊಂದು ಬೆನಿಫಿಟ್ ಇರುತ್ತದೆ. ತಮಿಳ್ನಾಡು ಮತ್ತು ಆಂಧ್ರ ಪ್ರದೇಶದವರು ಒಂದೊಂದು ಹೆಚ್ಚು ಬೆನಿಫಿಟ್ ಕೊಟ್ಟಿದ್ದಾರೆ, ನಾವು ಕೊಟ್ಟಿಲ್ಲವೆಂದು ಹೇಳುತ್ತೀರಿ. ಆ ಲೆಕ್ಕ ಹಾಕಿದರೆ ಎಲ್ಲ ರಾಜ್ಯಗಳಿಗಿಂತ (ಏಡೆಡ್ ಮತ್ತಿತರ ಎಲ್ಲ ಸಂಸ್ಥೆಗಳನ್ನು ತಗೆದುಕೊಂಡರೆ) ಸುಮಾರು ೭ ಹೆಚ್ಚು ಸವಲತ್ತುಗಳನ್ನು ನಾವು ಕೊಟ್ಟಿದ್ದೇವೆ. ಸಾಮಾನ್ಯವಾಗಿ, ಈಗಾಗಲೇ ಅತೀ ಹೆಚ್ಚಿನ ಸವಲತ್ತುಗಳನ್ನು ಕೊಟ್ಟಿರುವುದರಿಂದ ಈ ಎರಡು ಸವಲತ್ತುಗಳನ್ನು ಕೊಡುವಂತಹ ಅವಶ್ಯಕತೆ ಇಲ್ಲವೆಂದು ಸರ್ಕಾರ ಪರಿಶೀಲನೆ ಮಾಡಿ ಒಂದು ನಿರ್ಣಯಕ್ಕೆ ಬಂದಿದೆ. ಏಕೆಂದರೆ, ನಾವು ೭ ಹೊಸ ಸವಲತ್ತುಗಳನ್ನು ಕೊಟ್ಟಿರುವಾಗ ಮತ್ತೊಂದು ರಾಜ್ಯದಲ್ಲಿ ಮತ್ತೊಂದು ಕೊಟ್ಟಿದ್ದಾರೆಂದು ನೋಡುತ್ತಾ ಹೋದರೆ ಅವಕ್ಕೆ ಕೊನೆ ಇರುವುದಿಲ್ಲ. ಆದುದರಿಂದ, ಯಾವ ಪೆನ್‌ಷನ್ ದಾರರಿಗೂ ಯಾವ ಸಂಸ್ಥೆಯಲ್ಲೂ ತೊಂದರೆಯಾಗಿಲ್ಲವೆಂದು ಅನ್ನಿಸುತ್ತದೆ. In the process if a few employees are affected, I am prepared to look into it.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅದು ಎಷ್ಟರ ಮಟ್ಟಿಗೆ ಅಫೆಕ್ಟ್ ಆಗಿದೆ ಎಂಬುದನ್ನು ಪೆನ್‌ಷನರ್ಸ್ ಅಸೋಷಿಯೇಷನ್‌ನವರೊಡನೆ ಸವಾಲೋಚಿಸಿ ನೋಡುತ್ತೇನೆ.

ಅಧ್ಯಕ್ಷರು.—ತಾವೇ ಬಂದು ಚರ್ಚೆ ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಾವು ಮತ್ತು ಅವರು ಕೂಡಿ ಬಂದು ಬೇಟಿಯಾಗುತ್ತೇವೆ.

10 Points Programme for the Welfare of Handloom Weavers

405. SRI V. V. PATTAR (Jamkhandi).—Will the Minister for Food and Civil Supplies be pleased to state.—

(a) whether the Government has accepted the 10 points programme for the upliftment;

(b) whether the Government execute the 10 points programme for the uplift of weavers and Artisan Communities;

(c) whether the Government implement this programme in this year?

SRI MANIKRAO PATIL (Minister for Food and Civil Supplies).—(a), (b) and (c) Decision has been taken by Government to implement a ten point programme for the welfare of the handloom weavers. Necessary orders in this behalf have already been issued. Most of the schemes under the ten point programmes which are spread over a period are being implemented this year.

ಶ್ರೀ ವಿ. ವಿ. ಪತ್ತಾರ್.—ಕೈಮಗ್ಗದ ನೇಕಾರರ ಕಲ್ಯಾಣಕ್ಕಾಗಿ ೧೦ ಅಂಶಗಳ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಸರ್ಕಾರ ಅವಶ್ಯಕ ಆದೇಶ ಹೊರಡಿಸಿರುವುದಾಗಿ ಹೇಳಿದ್ದೀರಿ. ಬೇರೆ ಬೇರೆ ೧೦ ಅಂಶಗಳ ಸಲುವಾಗಿ ಆದೇಶಗಳನ್ನು ಹೊರಡಿಸಿದ್ದೀರಾ? ಮತ್ತು ಪ್ರತಿಯೊಂದು ಅಂಶಗಳನ್ನು ಅನುಷ್ಠಾನ ಮಾಡಲು ಎಷ್ಟೆಷ್ಟು ಹಣವನ್ನು ಇಟ್ಟಿದ್ದೀರಿ?

SRI MANIK RAO PATIL.—As suggested by the Hon. Minister for Handlooms and Handicrafts, a decision has been taken to implement ten points programme for the betterment and improving the conditions of weavers. They are as follows: Supply of improved appliances, procurement and distribution of raw materials, organisation of marketing facilities, providing training in modern technology so as to compete in the open market, ensuring minimum wages to weavers, providing health and medical facilities, providing housing facilities, saving and insurance coverage to all weavers' families, enforcement of ban orders on powerlooms.

ಶ್ರೀ ವಿ. ವಿ. ಪತ್ತಾರ್.—ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದಿರಿ, ಆದರೆ ಏನೇನು ಕ್ರಮ ಗಳನ್ನು ತೆಗೆದುಕೊಂಡಿದ್ದೀರೆಂಬ ವಿವರ ಕೊಡುತ್ತೀರಾ? ಪ್ರತಿಯೊಂದು ಅಂಶದ ಸಲುವಾಗಿ ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಇಟ್ಟಿದ್ದೀರಿ?

SRI MANIK RAO PATIL.—I request the hon. Member to put a specific question If I go by his question, probably I will have to place the administrative report of the entire handloom Development Board itself.

ಶ್ರೀ ವಿ. ವಿ. ಪತ್ತಾರ್.—ಪವರ್‌ಲೂಂಗಳನ್ನು ಪ್ರಾರಂಭಿಸುವ ಸಲುವಾಗಿ ಹ್ಯಾಂಡ್‌ಲೂಂಗಳಲ್ಲಿ ಬಣ್ಣದ ಬಟ್ಟೆಗಳನ್ನು ನೇಯಬಾರದೆಂದು ಒಂದು ಕಾಯಿದೆ ಮಾಡಲಾಯಿತು. ಆದರೆ ಅದನ್ನು ೫ ವರ್ಷ ಗಳ ಕಾಲ ಜಾರಿಗೆ ತರಲಿಲ್ಲ. ಈಗ ಕೇಂದ್ರ ಸರ್ಕಾರದವರು ಒಂದು ವರ್ಷ ಅದರ ಅವಧಿಯನ್ನು ವಿಸ್ತರಿಸಿದ್ದಾರೆ. ತಾವೇನಾದರೂ ಅದನ್ನು ನಿರ್ದಿಷ್ಟವಾಗಿ ಅನುಷ್ಠಾನ ಮಾಡಬೇಕೆಂದು ಆಜ್ಞೆ ಹೊರಡಿಸಿ ದ್ದೀರಾ?

SRI MANIK RAO PATIL.—Actually, it is a conflict between two parties. One is those who are engaged in weaving by means of power-looms and the other is, by means of handlooms. There are two powerful sections belonging to different category of weavers. However, the Textile Commissioner has extended the ban order

upto 31-3-83 and we have also issued strict instructions to district authorities and Deputy Commissioners to see that this ban order is implemented and enforced strictly.

ಶ್ರೀ ವಿ. ವಿ. ಪತ್ತಾರ್.—೧೦ ಅಂಶಗಳ ಕಾರ್ಯಕ್ರಮಕ್ಕೆ ೫ ವರ್ಷಗಳಲ್ಲಿ ೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ, ಈ ವರ್ಷದ ಆಯವ್ಯಯದಲ್ಲಿ ಆ ಬಾಬಿಗಾಗಿ ಎಷ್ಟು ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ?

ಅಧ್ಯಕ್ಷರು.—ಆಯವ್ಯಯದ ಪುಸ್ತಕವನ್ನು ತಮಗೆ ಕೊಟ್ಟಿದೆ. ಅದು ತಮ್ಮ ಕಡೆ ಇದೆಯೋ ಇಲ್ಲವೋ?

ಶ್ರೀ ವಿ. ವಿ. ಪತ್ತಾರ್.—ಇದೆ. ಆದರೆ ೧೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ಕೊಡುವುದಕ್ಕೆ ಅದರಲ್ಲಿ ಯಾವ ಹಣವನ್ನೂ ಇಟ್ಟಿಲ್ಲ. ಈ ಒಂದು ಬಾಬಿಗಾಗಿ ಹಣ ಖರ್ಚು ಮಾಡತಕ್ಕದ್ದು ಬಹಳ ಅವಶ್ಯಕವಾಗಿದೆ. ಈಗ ಇದಕ್ಕಾಗಿ ಸ್ವಲ್ಪವೂ ಹಣ ಖರ್ಚು ಮಾಡುತ್ತಿಲ್ಲವಾದ್ದರಿಂದ ಇದಕ್ಕೆ ಈಗಲಾದರೂ ಹಣ ಖರ್ಚು ಮಾಡುತ್ತೀರಾ ಹಣ ಇಡುತ್ತೀರಾ ಎಂದು ಕೇಳಂತ್ತಿದ್ದೇನೆ.

SRI MANIK RAO PATIL.--It is not correct to say that the Government has not done anything in this regard. In fact, on various demands the Government has sanctioned and released sufficient money. For example, there was a demand for taking up housing, scheme in favour of weavers. In this regard we have spent so far Rs. 43-16 lakhs in the form of loan and subsidy. So also we have provided financial assistance to them through the Weaving Co-operative Society for changing the age old peddle-looms to frame-looms. Like wise, we have also taken up programmes for ensuring supply of raw meterials through the Handloom Development Corporation. So, sir, there is absolutely no reason to have any apprehension that the Government is not doing anything in this regard.

Development of Harinala Project

414 SRI R. C. BALEKUNDARGI (Bailhongal).—Will the Minister of State for Major and Medium Irrigation be pleased to state.—

(a) whether the Harinala Project in Bailhongal taluk has been reconsidered;

(b) its estimated cost;

(c) the number of villages that would be benefitted by the Irrigation project and the extent of acres for which water would be supplied;

(d) the amount of earmarked for the project in the current year ?